# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಿ4(7) ಪ್ರಾ..ಶಾ.ಶಿ ವರ್ಗ/55/2011-12. ದಿನಾಂಕ: 03.05.2011

## ಜ್ಞಾಪನ

ವಿಷಯ: 2011-12ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಗಣಕ ಯಂತ್ರ ವ್ಯವಸ್ಥೆ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿ.

ಉಲ್ಲೇಖ: ಈ ಕಛೇರಿಯ ಅಧಿಕೃತ ಜ್ಞಾಪನದ ಸಮಸಂಖ್ಯೆ ದಿನಾಂಕ: 27.04.2011.

**********

2011-12ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಕನಿಷ್ಠ ಮೂರು ವರ್ಷ ಸೇವಾವಧಿ ನಿಲುಗಡೆ ಬಗ್ಗೆ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದೆ.

| ಪ್ರಶ್ನೆ | ಉತ್ತರ |
|---|---|
| ಪರಸ್ಪರ ವರ್ಗಾವಣೆ ಸೇರಿದಂತೆ ಎಲ್ಲಾ ರೀತಿಯ ವರ್ಗಾವಣೆಗಳಿಗೆ ಅರ್ಜಿ ಸಲ್ಲಿಸಲು ಶಿಕ್ಷಕರು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಕಡ್ಡಾಯವಾಗಿ ಮೂರು ವರ್ಷ ಸೇವೆ ಸಲ್ಲಿಸಿರಬೇಕೆ ? | ಕರ್ನಾಟಕ ರಾಜ್ಯ ಸಿವಿಲ್ ಸೇವಾ(ಶಿಕ್ಷಕರ ವರ್ಗಾವಣಾ ನಿಯಂತ್ರಣ) ನಿಯಮಗಳು 2007 ರ 15 ನೇ ನಿಯಮದಡಿ **ವರ್ಗಾವಣೆಗೊಂಡು ಬಿಡುಗಡೆಯಾದ ಶಿಕ್ಷಕರು ಮಾತ್ರ** ವರ್ಗಾವಣೆಗೆ ಅರ್ಜಿ ಸಲ್ಲಿಸಬಯಸಿದಲ್ಲಿ ಅವರು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸ್ಥಳದಲ್ಲಿನ ನಿಲುಗಡೆ ಅವಧಿ ಕನಿಷ್ಠ ಮೂರು ವರ್ಷ ಪೂರೈಸಿರತಕ್ಕದ್ದು. ಇದು ಪರಸ್ಪರ ವರ್ಗಾವಣೆ ಸೇರಿದಂತೆ ಎಲ್ಲಾ ಪ್ರಕರಣಗಳಿಗೂ ಅನ್ವಯಿಸುತ್ತದೆ. |

(ಎ.ದೇವಪ್ರಕಾಶ್)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

03-05-11
(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ,

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು(ಆಡಳಿತ) ಅಪರ ಆಯುಕ್ತರ ಕಚೇರಿ, ಧಾರವಾಡ/ಗುಲ್ಬರ್ಗಾ
3. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು ವಿಭಾಗ/ಮೈಸೂರು ವಿಭಾಗ,
4. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಧಾರವಾಡ/ಗುಲ್ಬರ್ಗಾ.
5. ಕಛೇರಿ ಪ್ರತಿ.

\\Typing3server\d\E\EST4\Mamatha\LOKESH\Transfer-2011.doc